ಜೈನ್ ಕಾಲೇಜ್, ಜೆ.ಸಿ ರೋಡ್ ಬೆಂಗಳೂರು

ದ್ವಿತೀಯ ಪಿ.ಯು.ಸಿ (Mock-1) ಫೆಬ್ರವರಿ - 2015

ವಿಷಯ : ಕನ್ನಡ (01)

ಸಮಯ : 3 ಗಂಟೆ 15 ನಿಮಿಷ | ಒಟ್ಟು ಅಂಕಗಳು : 100

ಅ–ವಿಭಾಗ

**I. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ : 10 × 1 = 10**

1. ಯಾವಾಗ ಸೀತೆಯನ್ನು ರಾಮನಿಗೆ ಕೊಡುವೆನೆಂದು ರಾವಣನು ಯೋಚಿಸುತ್ತಾನೆ?
2. ಧರ್ಮಜನ ಹೊರಗೆ ಭೀತರಾದವರು ಯಾರು?
3. ಜಾಲಿಯ ರಸಸ್ವಾದ ಹೇಗಿರುತ್ತದೆ?
4. ಕುಳಿತು ಕೆಮ್ಮುವ ಪ್ರಾಣಿ ಯಾರು?
5. ವ್ಯರ್ಥವಲ್ಲದ ಕೆಲಸವು ಯಾವುದು?
6. ಯಾವುದು ನಮ್ಮ ಮೈಗೆ ಹತ್ತುವುದು?
7. ವಸುಧೆಗೆ ಒಡೆಯನೆನಿಸಿದವನು ಯಾರು?
8. ನಿರೂಪಕರಿಗೆ ಯಾವ ಕೆಲಸ ಖಾಯಮ್ಮಾಗಿತ್ತು?
9. ಆನೆ ಶಾಸ್ತ್ರದವನು ಏನೆಂದು ಭವಿಷ್ಯ ನುಡಿದಿದ್ದನು?
10. ಮುನ್ಸಿಪಾಲಿಟಿ ಪ್ರೆಸಿಡೆಂಟರ ಹೆಸರೇನು?

ಆ–ವಿಭಾಗ

**II.(ಅ) ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 4 × 2 = 8**

11. ಹೆಂಡತಿಯ ಹರಿಬಕ್ಕಾಗಿ ಗಂಡುಗೂಸು ಏನು ಮಾಡುತ್ತಾನೆ?
12. ಯಾರಿಂದ ಯಾವುದನ್ನು ಹೇಗೆ ಕಲಿಯಬೇಕೆಂದು ಸೋಮನಾಥನು ಹೇಳಿದ್ದಾನೆ?
13. ಮಗು ಕಲಿತ ವಿದ್ಯೆಗಳಾವುವು?
14. ಆತ್ಮಕ್ಕೆ ಕಮಟು ಹತ್ತುವುದು ಎಂದರೇನು?
15. ದನಗಳಿಗೆ ಜನಗಳಿಗೆ ಏನೇನು ಇಲ್ಲ?

**(ಆ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 3 × 2 = 6**

16. ಕುಂಡದಲ್ಲಿ ನೆಟ್ಟ ಗಿಡಗಳ ಸ್ಥಿತಿ ಹೇಗಿರುತ್ತದೆ?
17. ಮಳೆಗಾಲದಲ್ಲಿ ಹೊಳೆ ಹೇಗೆ ಕಿರಿಕಿರಿ ಎಬ್ಬಿಸುತ್ತದೆ?
18. ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು?
19. ಭಾವೈಕ್ಯತೆ ಈ ದೇಶದಲ್ಲಿ ಎಲ್ಲಿದೆ?

**(ಇ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 3 × 2 = 6**

20. ಮಠದವರಿಗೆ ಆನೆಗಿಂತ ವೇಲಾಯುಧವನ್ನು ಸಾಕಲು ತ್ರಾಸಾದುದೇಕೆ?
21. ಸೊರಗಿದ ಆನೆಯನ್ನು ಕೃಷ್ಣೇಗೌಡ ಹೇಗೆ ಸಾಕಿದ.
22. ಆನೆ ಮರತಳ್ಳುವ ಬಗೆಯನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?
23. ನಿರೂಪಕರು ಕ್ಯಾಲಿಕ್ಯುಲೇಟರಿನಲ್ಲಿ ಲೆಕ್ಕ ಹಾಕಿ ಜಬ್ಬಾರ್‌ಗೆ ಏನೆಂದರು?

ಇ–ವಿಭಾಗ

**III.(ಅ) ಕೆಳಗಿನ ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯಗಳನ್ನು ಬರೆಯಿರಿ: 2 × 3 = 6**

24. ಉಳಿದವರಳಿವೆನಗೇವುದೆಂ?
25. ತಾಯ ಮೊಲೆವಾಲು ನಂಜಾಗಿ ಕೊಲುವಡೆ
26. ಕೆಲಬರು ಗಳಿಸಿದೊಡೆ ಕೆಲರುಂಡ ಜಾರುವರು.

**(ಆ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯಗಳನ್ನು ಬರೆಯಿರಿ : 1 × 3 = 3**

27. ಭಗವಂತನ ಸೃಷ್ಟಿಯಲ್ಲಿರುವವರೆಲ್ಲ ಆತನ ಬಂಧುಗಳೆ
28. ಅದು ಯಾವ ಶಸ್ತ್ರಕ್ಕೂ ಮಣಿಯದು.

**(ಇ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯಗಳನ್ನು ಬರೆಯಿರಿ : 1 × 3 = 3**

29. ನಿನ್ನ ಪುಕಾರೇನಿದ್ರೂ ಬರ್‍ವಣಿಗೇಲಿ ಇರಬೇಕು.
30. ಕೋವಿ ಸಿಕ್ಕಿದೆ ಆದರೆ ಹೆಣ ಸಿಗಲಿಲ್ಲ.

**ಈ–ವಿಭಾಗ**

**IV.(ಅ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **3 × 4 = 12**

31. ರಾವಣನ ಮನಃಪರಿವರ್ತನೆಯ ಸಂದರ್ಭವನ್ನು ಕವಿ ಹೇಗೆ ಚಿತ್ರಿಸಿದ್ದಾನೆ? ವಿವರಿಸಿ.
32. ಮನುಷ್ಯ ಮನುಷ್ಯರ ನಡುವೆ ಅಂತಃಕರಣಗಳು ಸ್ಪಂದಿಸಬೇಕಾದ ವಿಚಾರವನ್ನು ಬಸವಣ್ಣ ಹೇಗೆ ನಿರೂಪಿಸಿದ್ದಾರೆ?
33. ಈ ಕಾವ್ಯಭಾಗದಲ್ಲಿ ಮೂಡಿಬಂದಿರುವ ಭೀಮ–ದ್ರೌಪದಿಯರ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.
34. ನಗರ ಜೀವನದ ಯಾಂತ್ರಿಕ ವಿವರಗಳು ಕವಿತೆಯಲ್ಲಿ ಹೇಗೆ ಚಿತ್ರಿತಗೊಂಡಿದೆ? ವಿವರಿಸಿ.

**(ಆ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **2 × 4 = 8**

35. ಅಭಿವೃದ್ಧಿ ತರುವ ಪ್ರಾಕೃತಿಕ ನಾಶದ ಸ್ವರೂಪವನ್ನು ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.
36. ತಾಯಿ–ತಂದೆ ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ ಹೇಗೆ? ವಿವರಿಸಿ.
37. ಎಂತಹ ತಿರುಳು ಕನ್ನಡದಲ್ಲಿ ಕತೆಯನ್ನು ಹೇಳುವುದಾಗಿ ಮುದ್ದಣ ಹೇಳುವನು?

**(ಇ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **2 × 4 = 8**

38. ಪುಟ್ಟಯ್ಯ ತನ್ನ ಅಸಹಾಯಕತೆಯನ್ನು ಹೇಗೆ ವಿವರಿಸುತ್ತಾನೆ?
39. ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲ ಕಾರಣಗಳೇನು?
40. ತನ್ನ ಆನೆಯ ಬಗ್ಗೆ ಕೃಷ್ಣೇಗೌಡನಲ್ಲಿ ಬೇಸರ ಮೂಡಲು ಕಾರಣಗಳೇನು?

**ಉ–ವಿಭಾಗ**

**V. (ಅ) ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ :** **1 × 5 = 5**

41. ಕರುಣಿಸುವೊಡೆನಗೆ ದಶಕಂ
ಧರ ಧುರದೊಳ್ ರಘುತನೂಜನಾಯುಃ ಪ್ರಾಣಂ
ಬರೆಗಂ ಬಾರದಿರೆನುತುಂ
ಧರಿತ್ರಿಯೊಳ್ ಮೈಯನೊಕ್ಕು ಮೂರ್ಛೆಗೆ ಸಂದಳ್

**ಅಥವಾ**

42. ಪರುಷದ ಗೃಹದೊಳಗಿದ್ದು, ತಿರಿವನೆ ಮನೆಮನೆಯ?
ತೊರೆಯೊಳಗಿದ್ದನು ತೃಷೆಯಾಗಲರಸುವನೆ ಕೆರೆಯುದಕವ?
ಮಂಗಳಲಿಂಗ ಅಂಗದ ಮೇಲೆ ಇದ್ದು
ಅನ್ಯಲಿಂಗಗಳ ನೆನವನೆ ನಿಮ್ಮ ಭಕ್ತನು
ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ?

**(ಆ) ಭಾಷಾಭ್ಯಾಸ :**

**ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರವನ್ನು ಬರೆಯಿರಿ :** **6 × 2 = 12**

43. ಈ ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ : 1. ಉಂಬು 2. ಮಾಹೆ
44. ಈ ಪದಗಳಿಗೆ ನಾನಾರ್ಥಕಗಳನ್ನು ಬರೆಯಿರಿ : 1. ಎಳೆ 2. ಅಡಿ
45. ಈ ತತ್ಸಮ ಪದಗಳಿಗೆ ತದ್ಭವಗಳನ್ನು ಬರೆಯಿರಿ : 1. ವಿಭು 2. ಮೂರ್ತಿ
46. ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ : 1. ಬೇರೂರು 2. ಒಡಕುಬಾಯಿ
47. ಈ ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ : 1. ಹೆಮ್ಮರ 2. ದುರ್ದೈವ
48. ಈ ಪದಗಳಲ್ಲಿನ ವಿಭಕ್ತಿಯನ್ನು ಬರೆಯಿರಿ : 1. ರಾಮನಿಂ 2. ಮಾರ್ಷನನ್ನು
49. ಈ ಪದಗಳಿಗೆ ನಿಷೇದ ರೂಪಗಳನ್ನು ಬರೆಯಿರಿ : 1. ಹೋಗುವಿರಿ 2. ತಿನ್ನು

**(ಇ) ಪತ್ರಲೇಖನ : ಈ ಕೆಳಗಿನ ಯಾವುದಾದರೂ ಒಂದನ್ನು ಕುರಿತು 15 ವಾಕ್ಯಗಳಿಗೆ ಮೀರದಂತೆ ಒಂದು ಪ್ರಬಂಧವನ್ನು ಬರೆಯಿರಿ ಬರೆಯಿರಿ:** **1 × 4 = 4**

50. ಮಣ್ಣು–ಅಂತರ್ಜಲ ಸಂಗೋಪನೆ
51. ಜೈವಿಕ ಇಂಧನದ ಮಹತ್ವ

**(ಈ) ಪತ್ರಲೇಖನ : ಈ ಕೆಳಗಿನ ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ :** **1 × 4 = 4**

52. ನಿಮ್ಮ ಕಾಲೇಜಿನಲ್ಲಿ ಆಚರಿಸುವ 'ಸ್ವತಂತ್ರ ದಿನಾಚರಣೆಯನ್ನು' ಕುರಿತು ಗೆಳೆಯ/ಗೆಳತಿಗೊಂದು ಪತ್ರ ಬರೆಯಿರಿ.
53. ನಿಮ್ಮ ಗ್ರಾಮದ ಸೂಕ್ತ ಬಸ್ ಸಂಪರ್ಕ ವ್ಯವಸ್ಥೆಯನ್ನು ಕುರಿತು ಸಂಬಂಧಿಸಿದ ಅಧಿಕಾರಿಗೆ ಒಂದು ಪತ್ರ ಬರೆಯಿರಿ.

**(ಉ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ :** **1 × 4 = 4**

54. ಆಕಳು ಕಪ್ಪಾದರೆ ಹಾಲು ಕಪ್ಪೆ?
55. ಆಪತ್ತಿಗಾದವನೆ ನೆಂಟ, ತಾಪತ್ರೆಗೆ ಬಂದವನೇ ಬಂಟ.

* * * * *

# ಜೈನ್ ಕಾಲೇಜ್, ಜೆ.ಸಿ ರೋಡ್ ಬೆಂಗಳೂರು

## ದ್ವಿತೀಯ ಪಿ.ಯು.ಸಿ (Mock-2) ಫೆಬ್ರವರಿ - 2015

## ವಿಷಯ : ಕನ್ನಡ (01)

**ಸಮಯ : 3 ಗಂಟೆ 15 ನಿಮಿಷ** **ಒಟ್ಟು ಅಂಕಗಳು : 100**

### ಅ–ವಿಭಾಗ

**I. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ : 10 × 1 = 10**

1. ಯಾರನ್ನು ಯೋಗಿ ಎನ್ನಬಹುದು?
2. ಮಂದಿ ಮಕ್ಕಳೊಂದಿಗೆ ಹೇಗಿರಬೇಕು?
3. ಏನು ಬಂದೇ ತೀರುತ್ತದೆ ಎಂಬ ನಂಬಿಕೆಯಲ್ಲಿ ಜೀಸಸ್ ಶಿಲುಬೆ ಏರಿದ್ದಾನೆ?
4. ತೈಲ ತೀರಿದ್ದು ಹೇಗೆ ತಿಳಿಯುತ್ತದೆ?
5. ವಾಲ್‌ಪರೈಗೆ ಬಂದ ಬ್ರಿಟಿಷ್ ಪ್ರಜೆ ಯಾರು?
6. ಭಾಷೆ ಯಾವುದಕ್ಕಿಂತ ದೊಡ್ಡದು?
7. ಕಲ್ಲಪ್ಪನವರ ಗೂಢ ಪ್ರಶ್ನೆ ಯಾವುದು?
8. ಕೃಷ್ಣೇಗೌಡರ ಆನೆಯ ಹೆಸರೇನು?
9. ಆನೆಯ ಮಾವುತನ ಹೆಸರೇನು?
10. ರಮೇಶ್ ಬಾಬು ಯಾರು?

### ಆ–ವಿಭಾಗ

**II.(ಅ) ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 4 × 2 = 8**

11. ಯಾವ ಗುಣಗಳಿಲ್ಲದವನು ಡಾಂಭಿಕನೆನಿಸುತ್ತಾನೆ?
12. ತಾನು ಘೋರತರ ವಿಷ ಕುಡಿಯುವುದಾಗಿ ದ್ರೌಪದಿ ಏಕೆ ಹೇಳುತ್ತಾಳೆ?
13. ಎಣ್ಣೆಯಲ್ಲಿ ನೆನೆದು ಉರಿವ ಬತ್ತಿಯನ್ನು ಯಾವ ಯಾವುದಕ್ಕೆ ಹೋಲಿಸಲಾಗಿದೆ?
14. ಮುದುಕಿಯು ಯಾರನ್ನು ಏನೆಂದು ಪ್ರಾರ್ಥಿಸುವಳು?
15. ಕವಯಿತ್ರಿ ನಗುವ ನಗು ಎಂತಹುದು?

**(ಆ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 3 × 2 = 6**

16. ಸೀತಾಳ ಓದುವ ಆಸಕ್ತಿ ಹೇಗಿತ್ತು?
17. ಕರ್ನಾಟಕದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಹಾಮಾನಾ ಅಪೇಕ್ಷಿಸಿದ್ದಾರೆ?
18. ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಏನಾಗುತ್ತವೆ?
19. 'ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಯ್ತು' ಎಂದು ಮನೋರಮೆ ಹೇಳಿದ್ದೇಕೆ?

**(ಇ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : 3 × 2 = 6**

20. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?
21. ಡ್ರೈವರ್‌ನ ತಲೆ ಜಜ್ಜಿ ಹೋದದ್ದು ಹೇಗೆ? ಆನೆ ಅದಕ್ಕೆ ಕಾರಣವೆ?
22. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?
23. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?

### ಇ–ವಿಭಾಗ

**III.(ಅ) ಕೆಳಗಿನ ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯಗಳನ್ನು ಬರೆಯಿರಿ: 2 × 3 = 6**

24. ಕದಡಿದ ಸಲಿಲಂ ತಿಳಿವಂದದೆ
25. ಪಗೆಯಂ ಬಾಲಕನೆಂಬರೆ
26. ತಾಯಿ ಇಲ್ಲದ ತವರೀಗೆ ಹೋಗದಿರು ನನಮನವೆ

**(ಆ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯಗಳನ್ನು ಬರೆಯಿರಿ : 1 × 3 = 3**

27. ಅವನು ನನ್ನಷ್ಟೇ ಒಳ್ಳೆಯ ಡಾಕ್ಟರು, ಏನು ತಪ್ಪು ತಿಳಿಯಬೇಡ
28. ಕನ್ನಡಂ ಕತ್ತುರಿಯಲ್ತೆ

**(ಇ) ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ, ಸ್ವಾರಸ್ಯಗಳನ್ನು ಬರೆಯಿರಿ : 1 × 3 = 3**

29. ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳುಕೊ
30. ಈ ಕಂಬದೊಳ್ಗೆ ಏನೋ ಸೇರ್‌ಕೊಂಡಿದೆ

## ಈ–ವಿಭಾಗ

**IV.(ಅ) ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **3 × 4 = 12**

31. 'ಕದಡಿದ ಸಲಿಲಂ ತಿಳಿವಂದದೆ' ಕಾವ್ಯ ಭಾಗದಲ್ಲಿ ಕಂಡುಬರುವ ರಾವಣನ ವ್ಯಕ್ತಿತ್ವವನ್ನು ವಿಮರ್ಶಿಸಿ. ನಿಮ್ಮ ಮಾತುಗಳಲ್ಲಿ ಉತ್ತರಿಸಿರಿ.
32. ಭೀಮನು ದ್ರೌಪದಿಯನ್ನು ಹೇಗೆ ಸಂತೈಸಿದನು?
33. ಮುಂಬೈ ಜಾತಕದಲ್ಲಿ ಮಕ್ಕಳ ಬಾಲ್ಯದ ಚಿತ್ರಣ ಹೇಗೆ ನಿರೂಪಿತವಾಗಿದೆ?
34. 'ಶಿಲುಬೆ ಏರಿದ್ದಾನೆ' ಕವನದಲ್ಲಿ ಜೀಸಸ್ ವ್ಯಕ್ತಿತ್ವ ಮತ್ತು ಆತನ ಮಹತ್ವವನ್ನು ಕವಿ ಯಾವ ರೀತಿ ನಿರೂಪಿಸಿದ್ದಾರೆ? ವಿವರಿಸಿ.

**(ಆ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **2 × 4 = 8**

35. ಸಿಂಹಬಾಲದ ಕೋತಿಗಳು ಮತ್ತು ಹಾಡುಹಕ್ಕಿಗಳಿಗಾದ ಅನಾನುಕೂಲಗಳಾವುವು? ವಿವರಿಸಿ.
36. ಬೆಳ್ಳಿಲೋಟ ಕಂಡಾಗ ಧಣಿಯಲ್ಲಿ ಆತಂಕ, ಗಾಬರಿ, ಭಯ ಉಂಟಾಗಲು ಕಾರಣವೇನು?
37. ಹಳ್ಳಿಯ ಹೋಟೇಲುಗಳಲ್ಲಿ ಬಂದ ನವೀನತೆಯ ಕುರಿತು ಬರೆಯಿರಿ.

**(ಇ) ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **2 × 4 = 8**

38. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?
39. ಕಾಡಾನೆಗಳ ಹಾವಳಿ ನಿರೂಪಕರ ಅನುಭವಕ್ಕೆ ಬಂದುದು ಹೇಗೆ?
40. ಬೀದಿನಾಯಿಗಳ ನಿವಾರಣೆಗೆ ಖಾನ್ ಸಾಹೇಬರು ತೆಗೆದುಕೊಂಡಿದ್ದ ಕ್ರಮಗಳಾವುವು?

## ಉ–ವಿಭಾಗ

**V.(ಅ) ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ :** **1× 5 = 5**

41. ಪೊಸಗಾರ ಸಿಡಿಲ ಮಸಕಮ
ನಸಕಟೆದು ಕೃತಾಂತಜಿಹ್ವೆ ಪೊಡಕರಿಸುವವೋಲ್
ಬೆಸಸು ಬೆಸಸೆಂದು ಕರಮ
ರ್ವಿಸಿ ಸನ್ನಿದವಾಯ್ತು ವಿದ್ಯೆ ರಾವಣನಿದಿರೊಳ್

**ಅಥವಾ**

42. ಎಲ್ಲರೊಳು ಕಲಿಭೀಮನೇ ಮಿಡು
ಕುಳ್ಳ ಗಂಡನು ಹಾನಿ ಹರಿಬಕೆ
ನಿಲ್ಲದಂಗೈಸುವನು ಕಡು ಹೀಹಾಳಿಯುಳ್ಳವನು
ಖುಲ್ಲನಿವನುಪಟಳವನಾತಂ
ಗೆಲ್ಲವನು ಹೇಳುವೆನು ಬಳಿಕವ
ನಲ್ಲಿ ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ

**VI. (ಅ) ಭಾಷಾಭ್ಯಾಸ :**

**ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರವನ್ನು ಬರೆಯಿರಿ :** **6 × 2 = 12**

43. ಈ ಪದಗಳ ಅರ್ಥವನ್ನು ಬರೆಯಿರಿ : 1. ಚರಮದೇಹದಾರಿ 2. ಕೆಯ್ಯ
44. ಈ ಪದಗಳಿಗೆ ನಾನಾರ್ಥಕಗಳನ್ನು ಬರೆಯಿರಿ : 1. ನಡು 2. ಫಲ
45. ಈ ಕೆಳಗಿನ ಕ್ರಿಯಾಪದಗಳಲ್ಲಿ 'ಧಾತು' ಗುರುತಿಸಿ : 1. ಓಡಿದನು 2. ಎದ್ದರು
46. ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ : 1. ಕೈಯೊಡ್ಡು 2. ಸಿಂಹಸ್ವಪ್ನ
47. ಈ ಪದಗಳ ಗುಣವಾಚಕಗಳನ್ನು ಬರೆಯಿರಿ : 1. ರಸಬಳ್ಳಿ 2. ಪೊಲ್ಲವಾರ್ತೆ
48. ಈ ಪದಗಳ ನಿಷೇಧ ರೂಪ ಬರೆಯಿರಿ : 1. ಹಾಡುವೆ 2. ನಿಲ್ಲುವುದು
49. ಈ ಪದಗಳ ವಿಭಕ್ತಿ ಪ್ರತ್ಯಯಗಳನ್ನು ಬರೆಯಿರಿ : 1. ರಾವಣನೇ 2. ವಲ್ಲಭನ

**(ಆ) ಪತ್ರಲೇಖನ : ಈ ಕೆಳಗಿನ ಯಾವುದಾದರೂ ಒಂದನ್ನು ಕುರಿತು 15 ವಾಕ್ಯಗಳಿಗೆ ಮೀರದಂತೆ ಒಂದು ಪ್ರಬಂಧವನ್ನು ಬರೆಯಿರಿ** **1 × 4 = 4**

50. ನಗರ ನೈರ್ಮಲ್ಯ ಕಾಪಾಡುವಲ್ಲಿ ನಾಗರಿಕರ ಪಾತ್ರ.
51. ಸಮಾನ ಶಿಕ್ಷಣದ ಅವಶ್ಯಕತೆ

**(ಇ) ಪತ್ರಲೇಖನ : ಈ ಕೆಳಗಿನ ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ :** **1 × 4 = 4**

52. ಶೈಕ್ಷಣಿಕ ಪ್ರವಾಸ ಹೊರಡಲು ದೂರದಲ್ಲಿರುವ ನಿಮ್ಮ ತಂದೆಯವರಿಗೆ ಅನುಮತಿ ಕೋರುತ್ತ ಒಂದು ಪತ್ರ ಬರೆಯಿರಿ.
53. ನಿಮ್ಮ ಕಾಲೇಜಿನಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭವನ್ನು ಕುರಿತು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರ ಬರೆಯಿರಿ.

**(ಈ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ :** **1 × 4 = 4**

54. ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು.
55. ಸಜ್ಜನರ ದುಃಖ, ದುರ್ಜನರ ಸಿರಿ ಶಾಶ್ವತವಲ್ಲ.

* * * * *